APRIL 19, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಭಾರತದ ನವೀಕರಿಸಬಹುದಾದ ಇಂಧನ ಉತ್ಪಾದನಾ ಪ್ರಯಾಣದಲ್ಲಿ, ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯ 25 ಸಾವಿರದ 700 ಮೆಗಾವ್ಯಾಟ್‌ಗಳಿಗಿಂತ ಹೆಚ್ಚು ಸ್ಥಾಪಿತ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಹೊಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಬೆಂಗಳೂರಿನಲ್ಲಿ, ಕಾಮನವೆಲ್ತ್ ಲೀಗಲ್ ಎಜುಕೇಶನ್ ಅಸೋಸಿಯೇಶನ್ ಆಯೋಜಿಸಿದ 'ಸುಸ್ಥಿರ ಇಂಧನ ಶಕ್ತಿ' ಕುರಿತು ಅಂತಾರಾಷ್ಟ್ರೀಯ ಸಮಾವೇಶವನ್ನು ನಿನ್ನೆ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕವು, 10 ಸಾವಿರದ 500 ಮೆಗಾವ್ಯಾಟ್‌ಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸೌರಶಕ್ತಿ, 3 ಸಾವಿರದ 800 ಮೆಗಾವ್ಯಾಟ್ ಜಲಶಕ್ತಿ ಸಾಮರ್ಥ್ಯ ಹಾಗೂ 7 ಸಾವಿರದ 900 ಮೆಗಾವ್ಯಾಟ್ ಪವನ ಶಕ್ತಿ ವಿದ್ಯುತ್ ಉತ್ಪಾದಿಸುತ್ತಿದೆ. ಪಾವಗಡದ ಸೌರ ಉದ್ಯಾನವನವು, ವಿಶ್ವದ ಅತಿದೊಡ್ಡ ಸೌರ ಶಕ್ತಿ ಕೇಂದ್ರಗಳಲ್ಲಿ ಒಂದಾಗಿದೆ ಎಂದರು. PM-KUSUM ಯೋಜನೆಯಡಿಯಲ್ಲಿ, ಕೃಷಿಕರ ಸೋಲಾರ್ ಪಂಪ್‌ಗಳಿಗೆ ಸಬ್ಸಿಡಿಯನ್ನು, ಶೇಕಡ 50 ಕ್ಕೆ ಹೆಚ್ಚಿಸಲಾಗಿದೆ ಎಂದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು, ಹಾವೇರಿ ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾರೆ. ಈ ಮಧ್ಯಾಹ್ನ 12. 15 ಕ್ಕೆ, ಹೆಲಿಕಾಪ್ಟರ ಮೂಲಕ ರಾಣಿ ಬೆನ್ನೂರು ತಾಲೂಕು ಕ್ರೀಡಾಂಗಣದ ಹೆಲಿಪ್ಯಾಡ್ ಗೆ ತಲುಪಲಿರುವ ಅವರು, ದೊಡ್ಡಕೆರೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಬಳಿಕ, 1.15 ಕ್ಕೆ ನಿಟ್ಟೂರ ಗ್ರಾಮ ತಲುಪಿ, ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಸುವರ್ಣ ಮಹೋತ್ಸವ, ಭಕ್ತ ಕನಕದಾಸರ ಮಹಾದ್ವಾರ ಉದ್ಘಾಟನೆ ಹಾಗೂ ಧರ್ಮಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ಪಾಲಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಮರಾಠಿ ಶಾಲೆಯ, 10ನೇ ತರಗತಿ ವಿದ್ಯಾರ್ಥಿನಿ, ಅಕ್ಷರಾ ದುಲಬಾ ಮಲ್ಲಿಕ್, ಶಿಕ್ಷಕ ಎ.ಪಿ. ಪಾಟೀಲ ಮಾರ್ಗದರ್ಶನದಲ್ಲಿ, *'ಸೈಕಲ್ ಪಡೆಲ್ಡ್ ಪ್ಯಾಡಿ ಇನ್‌ಕ್ಯುಬೇಟರ್'* ತಯಾರಿಸಿ, ಗಮನ ಸೆಳೆದಿದ್ದಾರೆ. *ಇನ್‌ಸ್ಪೈರ್ ಅವಾರ್ಡ್* ಅಡಿ, ಜಪಾನ್ ದೇಶದ, ಸುಕುರಾ ಸಮ್ಮೇಳನದಲ್ಲಿ ಅವರು ಭಾಗವಹಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅಕ್ಷರಾ ಮಲ್ಲಿಕ್ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಅಕ್ಷರಾ ದುಲಬಾ ಮಲ್ಲಿಕ್ 31 ಧ್ವನಿ ಸೆಕೆಂದುಗಳು

<><><>

ಕಲಬುರಗಿಯಲ್ಲಿ 20 ಕೋಟಿ ರೂಪಾಯಿ ವೆಚ್ಚದಲ್ಲಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ, ನೂತನ ಕೇಂದ್ರ – ಕಚೇರಿ ನಿರ್ಮಾಣ ಮಾಡಲು, ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ ಎಂದು ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮತ್ತ ಷ್ಟ ಬಲಪಡಿಸಲು ಹಾಗೂ ಸಿಬ್ಬಂದಿಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

<><><>

ಕಲಬುರಗಿಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ, ಹತ್ತನೇ ಘಟಿಕೋತ್ಸವ, 22ರಂದು ಬುಧವಾರ, ಮಧ್ಯಾಹ್ನ 2 ಗಂಟೆಗೆ, ಕಲಬುರಗಿಯ ಸಿ.ಯು.ಕೆ. ವಿವಿಧೋದ್ದೇಶ ಭವನದಲ್ಲಿ ಜರುಗಲಿದೆ. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ ಅತಿಥಿಯಾಗಿ ಪಾಲ್ಗೊಳ್ಳುವರು ಎಂದು, ಉಪ ಕುಲಪತಿ, ಬಟ್ಟು ಸತ್ಯನಾರಾಯಣ ತಿಳಿಸಿದ್ದಾರೆ.

<><><>

ವಿಶ್ವ ಹಿಮೋಫಿಲಿಯಾ ದಿನಾಚರಣೆ ಅಂಗವಾಗಿ, ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ವತಿಯಿಂದ, ಇಂದು ಹುಬ್ಬಳ್ಳಿಯ ಬೈಲಪ್ಪನವರ ನಗರದಲ್ಲಿರುವ, ಐ.ಎಂ.ಎ ಹೌಸ ನಲ್ಲಿ, ಕುಸುಮ ರೋಗ ನಿಯಂತ್ರಣದ ಕುರಿತು ಸಂವಾದ ಕಾರ್ಯಕ್ರಮ ಆಯೋಜಿತವಾಗಿದೆ. ನುರಿತ ವೈದ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಪದ್ಮಶ್ರೀ ಸುರೇಶ ಹನಗವಾಡಿ ಅವರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ.

<><><>

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ, ಕಿವಿ, ಮೂಗು, ಗಂಟಲು ವಿಭಾಗದಿಂದ, “ನಮ್ಮ ಧ್ವನಿಯ ಆರೈಕೆ” ಎಂಬ ವಿ ’ಯ ದಡಿ, ‘ವಿಶ್ವ ಧ್ವನಿ’ ದಿನಾಚರಣೆ ಜರುಗಿತು. ಅಖಿಲ ಭಾರತ, ವಾಕ್ ಮತ್ತು ಶ್ರವಣ ಸಂಸ್ಥೆಯ, ವಾಕ್ ಮತ್ತು ಭಾ ಾ ತಜ್ಞೆ, ಡಾಕ್ಟರ್ ದಿವ್ಯಾ ಸೇಠ, ಧ್ವನಿಯ ಆರೈಕೆ, ಧ್ವನಿಯ ಅಸ್ವಸ್ಥತೆಗಳನ್ನು ಗುರುತಿಸುವುದು ಮತ್ತು ವಿಶೇ ’ವಾಗಿ, ತಮ್ಮ ವೃತ್ತಿಗಳಲ್ಲಿ ಧ್ವನಿಯನ್ನು ಹೆಚ್ಚು ಅವಲಂಬಿಸಿರುವ ವ್ಯಕ್ತಿಗಳಲ್ಲಿ, ಆರೋಗ್ಯಕರ ಧ್ವನಿ ಕಾಪಾಡಿಕೊಳ್ಳುವ ಬಗ್ಗೆ, ಮಾಹಿತಿ ನೀಡಿದರು.

<><><>

ಹಾಸನ ಜಿಲ್ಲೆ, ಬೇಲೂರು ತಾಲೂಕಿನ ಒಂಟಿ ಕೋರೆ ಕಾಡಾನೆಯನ್ನು, ಬೇಲೂರಿನ ಕಾನಳ್ಳಿ ಅರಣ್ಯದಲ್ಲಿ, ಅರಣ್ಯ ಇಲಾಖೆ ಸಿಬ್ಬಂದಿ, ಮತ್ತೊಮ್ಮೆ ಸೆರೆ ಹಿಡಿದಿದ್ದಾರೆ. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಸೌರಭಕುಮಾರ ನೇತೃತ್ವದಲ್ಲಿ, ಕುಮ್ಕಿ ಆನೆಗಳೊಂದಿಗೆ ಕಾಡಾನೆಯನ್ನು ಸೆರೆ ಹಿಡಿದು, ಸ್ಥಳಾಂತರಿಸಲಾಗಿದೆ.

<><><>

ನವ ಮಂಗಳೂರು ಬಂದರಿಗೆ, ‘ಸೆವನ್ ಸೀಸ್ ಮರೀನರ್’ ಹೆಸರಿನ ಐ ಾರಾಮಿ ಪ್ರವಾಸಿ ಹಡಗು ಆಗಮಿಸಿದೆ. 607 ಪ್ರವಾಸಿಗರು ಹಾಗೂ 460 ಸಿಬ್ಬಂದಿಗಳಿದ್ದ ಹಡಗನ್ನು ನವಮಂಗಳೂರು ಬಂದರು ಪ್ರಾಧಿಕಾರದ ಅಧಿಕಾರಿಗಳು ಸ್ವಾಗತಿಸಿದರು. ಪ್ರವಾಸಿಗರು, ವಿವಿಧ ಪ್ರವಾಸಿ ತಾಣಗಳನ್ನು ಸಂದರ್ಶಿಸಿದರು. ಈ ಹಡಗು ಕೊಚ್ಚಿಯಿಂದ ಆಗಮಿಸಿದ್ದು, ಮರ್ಮುಗೋವ್ ಕಡೆಗೆ ಪ್ರಯಾಣಿಸಲಿದೆ.

<><><>

**ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾರ್ಗಸೂಚಿಯಂತೆ, ಈ ತಿಂಗಳ 23 ಹಾಗೂ 24 ರಂದು ಸಿಇಟಿ–ಸಾಮಾನ್ಯ ಪ್ರವೇಶ ಪರೀಕ್ಷೆಗಳು ನಡೆಯಲಿವೆ. ಉತ್ತರ ಕನ್ನಡ ಜಿಲ್ಲೆಯ ಒಟ್ಟು 14 ಕೇಂದ್ರಗಳಲ್ಲಿ, 4 ಸಾವಿರದ 498 ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ತಿಳಿಸಿದ್ದಾರೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>